

ಹೆಂಡತಿ: ರೀ ಆ ಬೀದಿ ನಾಯಿ ಯಾಕೊ ಎಲ್ಲರನ್ನು ಬಿಟ್ಟು ನಿಮ್ಮನ್ನು ಮಾತ್ರ ದುರುಗುಟ್ಟಿಕೊಂಡು ನೋಡುತ್ತದೆ?

ಗುಂಡ: ನೆನ್ನೆ ರಾತ್ರಿ ನೀನು ಮಾಡಿದ ಚಿತ್ರಾನ್ನ ಜಾಸ್ತಿ ಉಳಿದಿತ್ತಲ್ಲ ಅದನ್ನು ಆ ನಾಯಿಗೆ ಹಾಕಿದ್ದೆ ಅದಕ್ಕೆ.

ವೈದ್ಯ: ರೀ ಗುಂಡ ನಿಮಗೇನು ಆಗಿಲ್ಲ! ಸುಮ್ಮನೆ ಆತಂಕ ಪಡಬೇಡಿ. ಪ್ರತಿದಿನ ಬೆಳಿಗ್ಗೆ ಎದ್ದ ತಕ್ಷಣ ಒಂದು ಲೋಟ ಬಿಸಿ ನೀರು ಕುಡಿಯಿರಿ.

ಗುಂಡ: ಅಯ್ಯೋ ಡಾಕ್ಟ್ರೇ! ಹದಿನೈದು ವರ್ಷದಿಂದ ನಾನು ಅದನ್ನೇ ಕುಡೀತಾ ಇರೋದು. ಆದರೆ ಅದನ್ನು ನನ್ನ ಹೆಂಡತಿ ಕಾಫಿ ಅಂತ ಕೊಡ್ತಾ ಇದಾಳೆ.

★★★

ಹೆಂಡತಿ: ರೀ ನೋಡ್ರಿ! ನನ್ನ ಕೂದಲು ಬಿಳಿ ಕೂದಲಾಗಿ ಬದಲಾಗ್ತಾ ಇದೆ.

ಗುಂಡ: ವಾಟ್ ಶುಡ್ ಐ ಡು?

ಹೆಂಡತಿ: ವೈ ಡೋಂಟ್ ಯು ಡೈ?

ಹೆಂಡತಿ: ಏನ್ರೀ ಇತ್ತೀಚೆಗೆ ಪ್ರತಿದಿನ ಕುಡ್ಕೊಂಡ್ ಮನೆಗೆ ಬರ್ತೀರಲ್ಲ. ಏನು ಸಮಾಚಾರ?

ಗುಂಡ: ಹೌದು ಕಣೇ! ರೈತರ ಸಾಲ ಮನ್ನಾ ಆಗಬೇಕಲ್ವ, ಸರ್ಕಾರಕ್ಕೆ ದುಡ್ಡು ಬೇಕು. ಅದಕ್ಕೆ ನನ್ನ ಕೈಲಾದಷ್ಟು ಸಹಾಯ ಮಾಡೋಣಾಂತ.

★★★

ಗುಂಡ: ಲೇ ತರಕಾರಿಗೆ ಅಂತ ಒಂದು ಸಾವಿರ ತಗೊಂಡು ಹೋಗಿದ್ದೆಯಲ್ಲ. ಏನಾಯಿತು?

ಹೆಂಡತಿ: ರೀ ಸುಮ್ಮನಿರಿ! ನಿಮ್ಮಮ್ಮ ಹೇಳೋದನ್ನ ಕೇಳಿಲ್ವಾ ನೀವು? ಸಂಸಾರ ಅಂದ ಮೇಲೆ ಸಾವಿರ ಹೋಗುತ್ತೆ ಬರುತ್ತೇಂತ. ಅದಕ್ಕೆಲ್ಲಾ ಲೆಕ್ಕ ಹಾಕಬೇಡಿ.

★★★

ತಾಯಿ: ಏನೋ ಹೆಂಡತಿ ಬರುತ್ತಿದ್ದ ಹಾಗೆಯೇ ನನ್ನನ್ನು ಮರೀತಾ ಇದೀಯಾ?

ಗುಂಡ: ಹಾಗೇನಿಲ್ಲಾಮ್ಮ! ಅವಳು ನನಗೆ ಲಕ್ಸ್ ಹಚ್ಚುತ್ತಾಳೆ.

ತಾಯಿ: ಇದಕ್ಕೂ ಮೊದಲು ಈ ತಾಯಿ ವಿಕ್ಸ್ ಹಚ್ಚುತ್ತಾ ಇದ್ದಳು ಎಂಬುದನ್ನು ಮರೀಬೇಡ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಪರೀಕ್ಷಾ ಪ್ರಶ್ನೆ ಪತ್ರಿಕೆಯಲ್ಲೊಂದು ಪ್ರಶ್ನೆ ಹೀಗಿತ್ತು.

ಸಮಕಾಲೀನ ತಂತ್ರಜ್ಞಾನ ಬೆಳವಣಿಗೆಯ ಪ್ರಕಾರ 1) ಯೋಚನೆಗಳನ್ನು ಧ್ವನಿಯಾಗಿ ಬದಲಿಸುವ 2) ಮಾತುಗಳನ್ನು ಮೌನವಾಗಿ ಬದಲಿಸುವ 3) ವೈವಾಹಿಕ ಸಂಬಂಧಗಳನ್ನು ವಿವಾಹೇತರ ಸಂಬಂಧಗಳಾಗಿ ಬದಲಿಸುವ ಮತ್ತು 4) ನಕಲಿ ಸುದ್ದಿಗಳನ್ನು ವಿಶ್ವಾಸಾರ್ಹ ಸುದ್ದಿಗಳಾಗಿ ಬದಲಿಸುವ ಸಾಧನಗಳಿಂದು ಲಭ್ಯವಿವೆ. ಅವುಗಳನ್ನು ಹೆಸರಿಸಿ ಗುಂಡ ಕ್ರಮವಾಗಿ ಉತ್ತರಿಸಿದ.

1. ಶರಾಬು 2. ಹೆಂಡತಿ, 3. ಫೇಸ್ ಬುಕ್ ಮತ್ತು 4. ವಾಟ್ಸ್ಯಾಪ್

ಪುಂಡ: ಪ್ರತಿಭೆ ಮತ್ತು ದೈವದತ್ತ ಕೊಡುಗೆಗಿರುವ ವ್ಯತ್ಯಾಸವೇನು?

ಗುಂಡ: ಶಿಕ್ಷಕ ಒಂದು ವಿಷಯದ ಮೇಲೆ ಎರಡು ಗಂಟೆ ಉಪನ್ಯಾಸ ನೀಡುವುದು ಪ್ರತಿಭೆ ಮತ್ತು ಹೆಂಡತಿಯೊಬ್ಬಳು ಯಾವುದೇ ವಿಷಯವಿಲ್ಲದೆ ಎರಡು ಗಂಟೆ ಲೆಕ್ಚರ್ ನೀಡುವುದು ದೈವದತ್ತ ಕೊಡುಗೆ.

★★★

ಆಂಗ್ಲ ಭಾಷೀಯ ಗುಂಡ ಜಿಂಕೆ (ಡಿಯರ್) ಒಂದನ್ನು ಬೇಟೆಯಾಡಿ ಅದರ ಅಡುಗೆಯನ್ನು ಮಕ್ಕಳಿಗೆ ಬಡಿಸುತ್ತಾ, 'ಇದರ ರುಚಿ ನೋಡಿ ಯಾವುದರ ಮಾಂಸವೆಂದು ಊಹಿಸಿ' ಎಂದ.

ಅಪರಿಚಿತ ರುಚಿ ಯಾವುದೆಂದು ಅರಿವಾಗದೆ ಮಕ್ಕಳು 'ಕ್ಲೂ' ಕೇಳಿದರು.

'ನಿಮ್ಮ ಮಮ್ಮಿ ನನ್ನನ್ನು ಅದರ ಹೆಸರಿನಿಂದ ಕರೆಯುತ್ತಾಳೆ' ಎಂದು ಸುಳಿವು ನೀಡಿದ ಗುಂಡ. ತಕ್ಷಣ ಚಿಕ್ಕ ಮಗ ಇತರ ಇಬ್ಬರು ಮಕ್ಕಳನ್ನು ಎಚ್ಚರಿಸಿದ 'ಛೀ... ತಿನ್ನ ಬೇಡ್ರೋ... ಅದು ಕತ್ತೆಯ ಮಾಂಸ'

★★★

ಹಿಂದಿ ಭಾಷಿಗ ಗುಂಡನಿಗೆ ಬ್ಯಾಂಕಿನಿಂದ ಒಂದು ಇಮೇಲ್ ಬಂತು, 'ತಕ್ಷಣ ನಿಮ್ಮ ಪಾನ್ ಡಿಟೇಲ್ಸ್ ಕಳಿಸಿ'

ಗುಂಡ ಪ್ರತ್ಯುತ್ತರ ಬರೆದ. 'ಕಚ್ಚಾ ಅಡಿಕೆ, ಸ್ವಲ್ಪ ಸ್ವಲ್ಪ ಹೆಚ್ಚು ಗುಲ್ಕಂದ್, ಸೋಂಪುಡಿ, ಏಲಕ್ಕಿ ಮತ್ತು ಸುಣ್ಣ. ಹ್ಞಾಂ, ಸುಣ್ಣ ಕೊಂಚ ಕಡಿಮೆಯಿರಲಿ'!

★★★

ಕಚೇರಿ ಕೆಲಸದ ಬಳಿಕ ಸಂಜೆ 7 ಗಂಟೆಗೆ ಗೆಳೆಯ ಪುಂಡನನ್ನು ರಾತ್ರಿಯೂಟದ ಸಲುವಾಗಿ ಗುಂಡ ತನ್ನ ಪತ್ನಿಗೆ ತಿಳಿಸದೆಯೇ ಮನೆಗೆ ಕರೆ




ತಂದ. ಪುಂಡ ಹಾಲ್‌ನಲ್ಲಿ ಕೂತಿದ್ದಂತೆಯೇ ಶ್ರೀಮತಿ ಗುಂಡ ಕಿರುಚಲಾರಂಭಿಸಿದಳು. 'ಪಾತ್ರೆಗಳನ್ನಿನ್ನೂ ತೊಳೆದಿಲ್ಲ, ಮನೆಯೆಲ್ಲೆಲ್ಲಾ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿವೆ. ಸಾಕಷ್ಟು ಅಡುಗೆ ಸಾಮಾನುಗಳು ಕೂಡಾ ಇಲ್ಲ. ನಾನಂತೂ ಮನೆಯಲ್ಲಿ ರಾತ್ರಿ ಅಡುಗೆ ಮಾಡುವ ಮೂಡ್‌ನಲ್ಲೇ ಇಲ್ಲ. ಯಾತ್ಕೇ ಆತನನ್ನು ಇವತ್ತು ಕರೆ ತಂದ್ರಿ?'

ಗುಂಡ ಸಮಾಧಾನ ಚಿತ್ತದಿಂದ ಎಲ್ಲವನ್ನೂ ಕೇಳಿಸಿಕೊಂಡ ನಂತರ ತಿಳಿಸಿದ, 'ಆತನೀಗ ಒಬ್ಬಂಟಿ. ಸದ್ಯದಲ್ಲೇ ಮದುವೆ ಮಾಡಿಕೊಳ್ಳುವ ತಯಾರಿಯಲ್ಲಿದ್ದಾನೆ. ಭವಿಷ್ಯದ ಜೀವನದ ಚಿತ್ರಣವನ್ನು ತೋರಿಸುವ ಸಲುವಾಗಿ ಆತನನ್ನಿಲ್ಲಿ ಕರೆ ತಂದೆ ಅಷ್ಟೆ ಕಣೇ...'

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**